### ಆತ್ರೆ ಸಂಗೀತ ಸ್ಮರಣೆ

‘ಸಂಗೀತದ ಪ್ರಭಾವಳಿ ಪ್ರಭಾ ಆತ್ರೆ’ (ಫೆ. 01, ಉಮಾ ಅನಂತ್) ‘ನಂದಾದೀಪ’ ಬರಹ ಆತ್ರೆ ಅವರ ಕುರಿತಂತೆ ಬಹಳ ವಿಷಯಗಳನ್ನು ತಿಳಿಸಿತು. ಇವರು ಸಂಗೀತ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯು ಅಪಾರ. ಸಂಗೀತ ಕಲಿಯುವ ಯುವ ಪೀಳಿಗೆಗೆ ದಾರಿದೀಪ.

—ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

### ಸೊಗಸಾದ ಪಾರ್ಟಿ

‘ಪಾಂಡಾಗಳ ಪಾರ್ಟಿ’ (ಫೆ. 01, ಗುರುರಾಜ್ ಎಸ್. ದಾವಣಗೆರೆ) ಲೇಖನ ಬಹಳ ಸೊಗಸಾಗಿತ್ತು. ಲೇಖನದೊಂದಿಗೆ, ಪಾಂಡಾಗಳ ಚಿತ್ರಗಳು ಕೂಡ ಬಹಳ ಮುದ ನೀಡಿದವು.

—ಸತೀಶ್ ಬಾಬು

### ಇಂಥವರ ಪರಿಚಯವಾಗಲಿ

‘ಅರುಣೋದಯ’ (ಫೆ. 01) ಚಿಕ್ಕದಾದ, ಚೊಕ್ಕದಾದ ಲೇಖನ ಓದಿ ಖುಷಿಯಾಯಿತು. ನಮ್ಮ ಕಡೆಯ ಒಬ್ಬ ಶಿಲ್ಪಿ ಈ ಮಟ್ಟಕ್ಕೆ ಬೆಳೆದಿರುವುದು ಬಹಳ ಸಂತಸದ ವಿಷಯ. ‘ಸುಧಾ’, ಮುಂದೆಯೂ ಇಂಥ ಹಲವರ ಪರಿಚಯ ಮಾಡಿಸಲಿ.

—ಜಿನಚಂದ್ರನ್ ಎಚ್.ಜೆ.



### ಹೋರಾಟದ ಫಲ

‘ಹೋರಾಟದ ಶಕ್ತಿ ಮತ್ತು ಭಕ್ತಿಯ ದಾರಿಯಲ್ಲಿ’ (ಫೆ. 01, ರಾಘವೇಂದ್ರ ತೊಗರ್ಸಿ) ಲೇಖನ ಸ್ಫೂರ್ತಿದಾಯಕವಾಗಿದೆ. ರಿಯಾನಾ ರಾಜು ಅವರ ದಿಟ್ಟತನದ ಹೋರಾಟದ ಫಲವಾಗಿ ಶಬರಿಯಾತ್ರೆಗೆ ಹೋಗಿ ಜಯ ಸಾಧಿಸಿದ್ದಾರೆ. ಎಲ್ಲರಂತೆ ಹಕ್ಕು ಪಡೆಯುವಲ್ಲಿ ಸಫಲರಾಗಿದ್ದಾರೆ. ಇವರ ಈ ಹೋರಾಟ ಮತ್ತೊಬ್ಬರಿಗೆ ಪ್ರೇರಣೆಯಂತಿದೆ. ರಿಯಾನಾ ರಾಜು ಅವರ ಈ ದಿಟ್ಟ ಹೋರಾಟ ಮುಂದುವರೆಯಲಿ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು




### ಸಂಗೀತದ ಹೊಸ ಭಾಷ್ಯ

‘ರ್ಯಾಪ್; ಹಿಪ್‌ಹಾಪ್’; ಹೊಸ ಕಾಲದ ಸ್ವರತಂತು ಊರು–ಕೇರಿಗೂ ಬಂತು (ಫೆ. 01, ವಿಶಾಖ ಎನ್.) ಮುಖಪುಟ ಲೇಖನ ಲವಲವಿಕೆಯಿಂದ ಕೂಡಿದೆ. ಸಂಗೀತ ಲೋಕದ ಹೊಸ ಭಾಷ್ಯದಂತಿರುವ, ಈ ತಲೆಮಾರಿನವರ ಅಭಿವ್ಯಕ್ತಿಯ ಮಾಧ್ಯಮವೂ ಆಗಿರುವ ರ್ಯಾಪ್, ಹಿಪ್‌ಹಾಪ್ ಹುಟ್ಟಿಕೊಂಡ ಬಗೆ ಆಸಕ್ತಿದಾಯವೆನಿಸಿತು. ರ್ಯಾಪ್, ಹಿಪ್‌ಹಾಪ್ ಹೇಗೆಲ್ಲಾ ತನ್ನ ಎಲ್ಲೆಗಳನ್ನು ವಿಸ್ತರಿಸಿಕೊಂಡು ವಿಶ್ವವ್ಯಾಪಿಯಾಗಿ ಬೆಳೆದು ನಮ್ಮ ನಡುವೆಯೂ ಅನುರಣಿಸುತ್ತಿರುವುದು ಅಚ್ಚರಿಯ ಸಂಗತಿಯಲ್ಲವೇ?

—ಧೀರಜ್ ಎಸ್., ಮಂಗಳೂರು

### ‘ರ್‍ಯಾಂಪ್’ ಅಲ್ಲ!

ಇದು ‘ರ್‍ಯಾಪ್; ಹೊಸ ಸಂಸ್ಕೃತಿ; ಪ್ರಕೃತಿ. ‘ರ್‍ಯಾಂಪ್’ ಬಗ್ಗೆ ಕೇಳಿದ್ದೆವು; ನೋಡಿಯೂ ಇದ್ದೆವು. ಆದರೆ ಇದು ಅದಲ್ಲ! ಇನ್ನೂ ಏನೇನು ನೋಡಲಿಕ್ಕಿದೆಯೊ! (ನಾಗರಿಕತೆಯೆ, ನಮಸ್ಕಾರ!)

—ಸಿಪಿಕೆ, ಮೈಸೂರು

### ಆನಂದಮಯ ಹಿಮಾಲಯ

‘ಎದೆಗೆ ಬಿದ್ದ ಹಿಮಾಲಯ’ (ಜ. 25, ರಹಮತ್ ತರೀಕೆರೆ) ಪ್ರವಾಸ ಚಿಂತನ ಲೇಖನ ಅತ್ಯುತ್ತಮವಾಗಿದೆ. ನಾನು ಹಿಮಾಲಯಕ್ಕೆ ಇಷ್ಟರ ತನಕ ಹೋಗಿಲ್ಲವಾದರೂ ಬರವಣಿಗೆಯ ಸುಂದರ ಶೈಲಿ ನಾನು ಸ್ವತಃ ಅಲ್ಲಿಗೆ ಹೋಗಿ ವಾಪಸ್ ಬಂದ ಹಾಗೆ ಮಾಡಿತು. ದುಡ್ಡು ಖರ್ಚು ಮಾಡಿಸದೇ ಹಿಮಾಲಯದ ಆನಂದಮಯ ಅನುಭವವನ್ನು ಸವಿಯಲು ಪ್ರೇರೇಪಿಸಿದ ಲೇಖಕರನ್ನು ಮೆಚ್ಚಲೇಬೇಕು.

—ಫಾ. ಎಡ್ವರ್ಡ್ ರೋಡ್ರಿಗಸ್, ಬೆಂಗಳೂರು

### ಯಾರಿಗೆ ಬೇಕು ಯುದ್ಧ?

‘ಯುದ್ಧಗಳು’ (ಜ. 25, ಡಾ. ಶಿವಶಂಕರ ಮೇಟಿ) ಕಥೆ ಓದುತ್ತಾ ಹೋದಂತೆ ಡಾಕ್ಟರ್, ಸಿಸ್ಟರ್ ಅವರ ಮಾನವೀಯತೆಗಳ ಶಕ್ತಿಯಿಂದ ಮನದ ಯುದ್ಧ ಗೆದ್ದ ಮರಿಯಾ ನಿರಾಶ್ರಿತರ ಗೆಲುವಿನ ಪ್ರತಿನಿಧಿಯಾಗಿ ಕಂಡಳು. ಕಾಲ ಕಳೆದಂತೆ ತಾನು ದೂಷಿಸುತ್ತಿದ್ದ ತನ್ನ ಮಗುವನ್ನು ಒಪ್ಪಿಕೊಂಡು ತಾಯ್ತನದ ಭಾವ ತೋರಿದ್ದು, ನಿಟ್ಟುಸಿರುಬಿಡುವಂತೆ ಮಾಡಿತು. ಯುದ್ಧದ ಭೀಕರತೆಯ ಚಿತ್ರಣ ಗಂಟಲು ಕಟ್ಟುವಂತೆ ಮಾಡಿತು.

—ನಿಂಗಮ್ಮ ಭಾವಿಕಟ್ಟಿ, ಹುನಗುಂದ

### ನನ್ನ ನೆಚ್ಚಿನ ‘ಸೆಲೆಬ್ರಿಟಿ’

ಮನೆಗೆ ‘ಸುಧಾ’ ಬರುತ್ತಿದ್ದಂತೆ ತಕ್ಷಣ ನಾನು ಓದೋದು, ಪುಸ್ತಕದ ಕೊನೆಯಲ್ಲಿ ಪ್ರಕಟಗೊಳ್ಳುವ ಸೆಲೆಬ್ರಿಟಿ ಅಂಕಣವನ್ನು. ವಿಶೇಷ ವ್ಯಕ್ತಿಗಳ ಬಗ್ಗೆ ಎಷ್ಟು ಚೆಂದದ ಮಾಹಿತಿಗಳನ್ನು ಕಲೆಹಾಕಿ ನೀಡಲಾಗಿರುತ್ತದೆ. ಲೇಖನ ಓದುವುದಕ್ಕೆ ಬಹಳ ಇಷ್ಟವಾಗುತ್ತದೆ.

ಈ ಹಿಂದೆ ವ್ಯಕ್ತಿಗಳ ಬಗ್ಗೆ ಎಚ್.ಎಸ್. ಕೆ ಅವರು ಬರೆಯುತ್ತಿದ್ದ ‘ಸಮಕ್ಷಮ’ ಅಂಕಣ ನೆನಪಾಯಿತು. ಪ್ರವೀಣ ಕುಲಕರ್ಣಿ ಅವರು ಹಲವು ವಿಶೇಷ ವ್ಯಕ್ತಿಗಳ ಪರಿಚಯ ಮಾಡಿಸುತ್ತಿದ್ದಾರೆ, ಅದೂ ತಮ್ಮದೇ ವಿಶೇಷ ಶೈಲಿಯಲ್ಲಿ. ಫೆ. 01ರಂದು ಹಾನಾ ಅವರ ಬಗೆಗಿನ ಲೇಖನ ಕೂಡ ಸೊಗಸಾಗಿತ್ತು.

—ವೆಂಕಟೇಶ್, ದಾವಣಗೆರೆ

### ಸ್ಫೂರ್ತಿದಾಯಕ ಕಥನ

‘ಅಂಧೇರಿ’ (ಫೆ. 01, ಪಾರ್ವತಿ ಪಿಟಗಿ) ಕಥೆ ಸ್ಫೂರ್ತಿದಾಯಕವಾಗಿದೆ. ರವಿ ಅವರ ಜೀವನದ ಕಥೆ ಎಷ್ಟೋ ಜನರಿಗೆ ಸ್ಫೂರ್ತಿ ನೀಡುವಂತಿದೆ. ಕುರುಡನಾದರೂ ಆತ್ಮವಿಶ್ವಾಸ ಕಳೆದುಕೊಳ್ಳದೆ ಮುನ್ನಡೆದ ರೀತಿ ಮತ್ತೊಬ್ಬರಿಗೆ ದಾರಿದೀಪದಂತಿದೆ. ಮುಂಬೈನ ಅಂಧೇರಿಯ ಚಿತ್ರಣವನ್ನು ಲೇಖಕಿಯು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಅಂಧೇರಿ ಪದದ ಅರ್ಥ ಕತ್ತಲು ಎಂದಿದ್ದರೂ, ಕತ್ತಲಿನಲ್ಲೂ ಸಾಧನೆಯ ಬೆಳಕು ಪಡೆದ ರವಿ ಅವರಂಥವರು ಪ್ರಪಂಚಕ್ಕೆ ಉತ್ತಮ ನಿದರ್ಶನಗಳು.

—ಸುಹಾಸಿನಿ ಎಂ.ಆರ್., ಹಾವೇರಿ

### ಅಂಧೇರಿಯಲ್ಲಿ ಯಶಸ್ಸೆಂಬ ಬೆಳಕು

ಕಥೆ ಸೊಗಸಾಗಿದೆ ಹಾಗೂ ಮನಮುಟ್ಟುವಂತಿದೆ. ಕಥೆಯಲ್ಲಿ ಎರಡು ವಿಷಯಗಳು ಗಮನಾರ್ಹವಾಗಿವೆ: ಅಂಧ ರವಿಯ ಯಶಸ್ಸು ಮತ್ತು ಆ ಸಮುಚ್ಚಯದ ವಿವಿಧ ರಾಜ್ಯಗಳ ನಿವಾಸಿಗಳ ದುರ್ಗಾಪೂಜೆಯ ಸಂಭ್ರಮ/ಜೀವನೋತ್ಸಾಹ ಮುಂತಾದುವು. ಅದರಲ್ಲೂ ರವಿಯವರ ಭಾಷಣ ಕೇಳುಗರೆಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿದ ಪರಿ ಪ್ರೇರಣಾದಾಯಕ ಅಂಶವಾಗಿತ್ತು!

—ಸುಬ್ರಹ್ಮಣ್ಯ, ಬೆಂಗಳೂರು




**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in